# ಸ್ವಾರ್ಥಿ ಮಿತ್ರ

■ ಸದ್ಯೋಜಾತ, ಅಸಗೋಡು
ಕಲೆ: ಸಂತೋಷ್ ಸಸಿಹಿತ್ಲು



ಚಂಚಲಪುರದಲ್ಲಿ ಆಕರ್ಷ್ ಮತ್ತು ಆಕಾಶ್ ಎಂಬ ಇಬ್ಬರು ಸ್ನೇಹಿತರಿದ್ದರು. ಅವರು ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಸಹಪಾಠಿಗಳು ಕೂಡ ಆಗಿದ್ದರಿಂದ ಉತ್ತಮ ಸ್ನೇಹ ಅವರಲ್ಲಿತ್ತು. ಓದಿನಲ್ಲಿ ಇಬ್ಬರೂ ಚೂಟಿಯಗಿದ್ದು ನಾ ಮುಂದು ತಾ ಮುಂದು ಎಂದು ಮಹಾಪೈಪೋಟಿ ನಡೆಸುತ್ತಿದ್ದರು.

ಆ ವರ್ಷ ಪರೀಕ್ಷೆಗಳು ಮುಗಿದು ರಜೆ ದೊರೆತಿತ್ತು. ಬೇಸಿಗೆಯಾದ್ದರಿಂದ ಮಾವಿನ ಹಣ್ಣಿನ ಸುಗ್ಗಿಯ ಕಾಲ. ಸಂಜೆ ವೇಳೆ ವಾಯುವಿಹಾರಕ್ಕೆಂದು ಇಬ್ಬರೂ ಊರಿನ ಮಾವಿನ ತೋಪಿನ ಕಡೆ ನಡೆದರು. ಮಾವಿನ ತೋಪಿನಲ್ಲಿ ನಾನಾ ನಮೂನೆಯ ಹಣ್ಣುಗಳು ಒಂದಕ್ಕಿಂತ ಒಂದು ರಸಭರಿತ ಕಂಪಿನಿಂದ ಕೂಡಿದ್ದವು. ಕೆಲ ಮರಗಳಲ್ಲಿ ಸ್ನೇಹಿತರಿಗೆ ಕೈಗೆಟುಕುವಂತೆ ಹಣ್ಣುಗಳು ತೂಗಾಡುತ್ತಿದ್ದವು. ತಮಗೆ ಇಷ್ಟವಾದ ಹಣ್ಣುಗಳನ್ನು ತಿನ್ನುವ ಆಸೆಯಾಯಿತು ಅವರಿಗೆ. ಸಂಜೆಯಾಗಿದ್ದರಿಂದ ತೋಟದಲ್ಲಿ ಯಾರೂ ಇರಲಿಲ್ಲ. ಇವರನ್ನು ಕೇಳುವವರೂ ಇರಲಿಲ್ಲ. ಸಾಮಾನ್ಯವಾಗಿ ತೋಟ ಕಾಯುವ ಮಾಲಿ ಯಾರನ್ನೂ ಒಳಗೆ ಬಿಡುತ್ತಿರಲಿಲ್ಲ. ಅಂದು ಮಾಲಿ ಬೇಗ ಮನೆಗೆ ಹೋಗಿದ್ದ.

ಮಾಲಿ ತೊಟದ ಹತ್ತಿರ ಬಂದವರಿಗೆ ತೋಟದಲ್ಲಿ ಕರಡಿ ಇದೆ ಆದು ಯಾವಾಗಲೂ ತೋಟ ಕಾಯುತ್ತಿರುತ್ತೆ ಎಂದು ಹೇಳುತ್ತಿದ್ದ. ಮಕ್ಕಳನ್ನು ಮತ್ತು ಹೆಣ್ಣುಮಕ್ಕಳನ್ನು ಹೊತ್ತುಕೊಂಡು ಹೋಗಿಬಿಡುತ್ತೆ ಎಂದು ಹೇಳುತ್ತಿದ್ದ. ಆಗೊಮ್ಮೆ ಈಗೊಮ್ಮೆ ಹಳ್ಳಿಯ ಒಬ್ಬರೋ ಇಬ್ಬರೋ ತೋಟದಲ್ಲಿ ಕರಡಿಯನ್ನು ನೋಡಿರುವುದಾಗಿ ದೃಢಪಡಿಸುತ್ತಿದ್ದರು. ಹೀಗಾಗಿ ಕರಡಿ ಕತೆ ಊರೆಲ್ಲಾ ಹಬ್ಬಿ ಜನರು ಮಾವಿನ ತೋಪಿನ ಹತ್ತಿರ ಸುಳಿಯುತ್ತಿರಲಿಲ್ಲ. ಆ ಧೈರ್ಯದಿಂದಲೇ ಮಾಲಿ ಮನೆಗೆ ಬೇಗನೇ ಹೋಗಿದ್ದಾನೆನಿಸುತ್ತೆ.

ಮಾಲಿ ತೋಟದಲ್ಲಿ ಇಲ್ಲದ ಆ ಸಮಯವನ್ನು ಸದುಪಯೋಗಪಡಿಸಿಕೊಂಡು ಆಕರ್ಷ್ ಮತ್ತು ಆಕಾಶ್ ತಮಗೆ ಇಷ್ಟವೆನಿಸಿದ ರಸಪೂರಿ ಮತ್ತು ಬಾದಾಮಿ ಹಣ್ಣುಗಳನ್ನು ತಿಂದು ತೃಪ್ತಿಪಟ್ಟುಕೊಂಡರು. ಸೂರ್ಯ ಮುಳುಗಲು ಸಿದ್ಧನಾಗುತ್ತಿದ್ದ. ಸಮಯವಾಯಿತೆಂದು ಸ್ನೇಹಿತರಿಬ್ಬರೂ ಮನೆಗೆ ಹೊರಡಲು ನಿರ್ಧರಿಸಿದರು. ನಾಲ್ಕೆಜ್ಜೆ ಇಡುವಷ್ಟರಲ್ಲಿ ಸ್ವಲ್ಪ ದೂರದಲ್ಲಿ ಕರಡಿ ತಮ್ಮಕಡೆ ಬರುವುದು ಕಾಣಿಸಿತು. ಇಬ್ಬರು ಸ್ನೇಹಿತರು ಗಾಬರಿಗೊಂಡರು. ಆಕರ್ಷ್ ಬಹಳಷ್ಟು ಚೂಟಿ. ಅವನು ಹಿಂದು ಮುಂದು ನೋಡದೆ ಹತ್ತಿರವಿದ್ದ ಮರವನ್ನೇರಿದ. ಆಕಾಶ್‌ಗೆ ಮರ ಹತ್ತಲು ಬಾರದ್ದರಿಂದ ಒಂದು ಕ್ಷಣ ಯೋಚಿಸಿದ. ಶಾಲೆಯಲ್ಲಿ ಅವರ ಕ್ಲಾಸ್ ಟೀಚರ್ ಕರಡಿಯ ಬಗ್ಗೆ ಹೇಳಿದ ಪಾಠ ನೆನಪಾಯಿತು ಅವನಿಗೆ. 'ಸಾಮಾನ್ಯವಾಗಿ ಶೇ. 80ರಷ್ಟು ಕರಡಿಗಳು ಹಣ್ಣು ಹಂಪಲುಗಳನ್ನೆ ಹೆಚ್ಚಾಗಿ ತಿನ್ನಿತ್ತವೆ. ಕೆಲ ಕರಡಿಗಳು ಗೊದ್ದ, ಹುಳು ಹುಪ್ಪಡಿಗಳನ್ನು ತಿನ್ನುತ್ತವೆ. ಮುಖ್ಯವಾಗಿ ದೊಡ್ಡ ಮತ್ತು ಸತ್ತ ಪ್ರಾಣಿಗಳನ್ನು ತಿನ್ನುವುದಿಲ್ಲ'. ಎಂದ ಮಿಸ್ ಮಾತುಗಳು ಆಕಾಶನ ಮನಃಪಟಲದ ಮೇಲೆ ಸಿನಿಮಾದಲ್ಲಿ ತೋರಿಸುವ ಫ್ಲಾಶ್ ಬ್ಯಾಕ್‌ನಂತೆ ಮೂಡಿ ಮಾಯವಾದವು. ಆಕಾಶ್ ತಕ್ಷಣ ಕಾರ್ಯಪ್ರವೃತ್ತನಾದ. ತಾನಿದ್ದ ಜಾಗದಲ್ಲೇ ನಿಶ್ಚಲನಾಗಿ ಶವದಂತೆ ಮಿಸುಕಾಡದೆ ಬಿದ್ದುಕೊಂಡ.

ಕರಡಿ ಆಕಾಶ್‌ನ ಹತ್ತಿರಬಂದು ಅವನನ್ನು ಒಂದು ಸುತ್ತು ಹಾಕಿ ಮೂಸಿ ನೋಡಿತು. ಧೈರ್ಯ ತಂದುಕೊಂಡು ನಿಶ್ಚಲನಾಗಿ ಸತ್ತವನಂತೆ ನಟಿಸಿದ. ಕ್ಷಣ ಹೊತ್ತು ಉಸಿರು ಬಿಗಿ ಹಿಡಿದ. ಅವನ ಕಿವಿ ಹತ್ತಿರ ಮೂಸಿ ಹೊರಟು ಹೋಯಿತು. ಕರಡಿ ಹೊರಟು ಹೋದಮೇಲೆ ಎದ್ದು ಕುಳಿತ ಆಕಾಶ್. ನಂತರ ಮರದಿಂದಿಳಿದು ಬಂದ ಆಕರ್ಷ್. ಕುತೂಹಲದಿಂದ ಆಕಾಶ್‌ನನ್ನು 'ಕರಡಿ ನಿನ್ನ ಕಿವಿಯಲ್ಲಿ ಏನು ಹೇಳಿತು' ಎಂದು ಕೇಳಿದ ಆಕರ್ಷ್. ಸಂಕಟದ ಸಮಯದಲ್ಲಿ ಸಹಾಯಕ್ಕಾಗದ ಆಕರ್ಷ್ ಮೇಲೆ ಕೋಪ ಬಂದಿತ್ತು ಅವನಿಗೆ. 'ಸಮಯದಲ್ಲಿ ಸಹಾಯಕ್ಕೆ ಆಗದ ನಿನ್ನಂತಹ ಸ್ನೇಹಿತರಿಂದ ದೂರವಿರು ಎಂದು ಹೇಳಿತು' ಎದು ಉತ್ತರಿಸಿದ ಆಕಾಶ್.

■